ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು):—

ಅ) ಸಣ್ಣ ನೀರಾವರಿ ಕೆಲಸಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಇಲ್ಲ.

ಇ) ಹಣಕಾಸಿನ ಲಭ್ಯತೆಯನ್ನವಲಂಬಿಸಿ ಹಂತ-ಹಂತವಾಗಿ ಕಾಲುವೆಗೆ ಲೈನಿಂಗ್ ಮಾಡುವುದು ಮತ್ತು ಮಂಜೂರಾದ ಬೆಳೆಗಳ ವಿಧಾನವನ್ನು ಆಳವಡಿಸಿಕೊಳ್ಳುವಂತೆ ಒತ್ತಾಯ ತರುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಹೊಸ ವಿದ್ಯಾರ್ಥಿ ನಿಲಯಗಳ ಮಂಜೂರಾತಿಯ ಬಗ್ಗೆ

೧೩೦೩. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೪-೮೫ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ರಾಜ್ಯದಲ್ಲಿ ಒಟ್ಟು ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿ ಎಷ್ಟು? ಮತ್ತು ನಿರ್ದಿಷ್ಟವಾಗಿ ಗುಲ್ಬರ್ಗಾ ಜಿಲ್ಲೆಯವರಿಗೆ ಪ್ರಾರಂಭವಾದ ಹೊಸ ವಿದ್ಯಾರ್ಥಿನಿಲಯಗಳು ಎಷ್ಟು?

ಆ) ಗುಲ್ಬರ್ಗಾ ಜಿಲ್ಲೆ ಯಾದಗಿರಿ ತಾಲ್ಲೂಕಿನ ಗಜಾರ್ ಜೊಟ್ ಗ್ರಾಮಕ್ಕೆ ಪರಿಶಿಷ್ಟ ಜಾತಿಯವರಿಗಾಗಿ ಮಂಜೂರಾದ ಹೊಸ ಸರ್ಕಾರಿ ವಿದ್ಯಾರ್ಥಿನಿಲಯ ಇತರ ಸ್ಥಳಕ್ಕೆ ವರ್ಗಾಯಿಸಿರುವುದು ನಿಜಾಂಶವಲ್ಲವೇ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು?

ಈ) ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದಲ್ಲಿ ಹಾಲಿ ಇರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಗಾಜರ್ ಕೋಟೆಯ ಗ್ರಾಮಸ್ಥರಿಂದ ಈ ಬಗ್ಗೆ ಏನಾದರೂ ಮನವಿ ಸಲ್ಲಿಸಲಾಗಿದೆಯೇ?

ಉ) ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು) —

ಅ) ೧೯೮೪-೮೫ನೇ ಸಾಲಿನಲ್ಲಿ ಎರಡು ಪದವಿ ಪೂರ್ವ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಯಿತು. ಗುಲ್ಬರ್ಗಾ ಜಿಲ್ಲೆಗೆ ಮಂಜೂರು ಮಾಡಿಲ್ಲ.

ಆ) ಹೌದು, ಅದನ್ನು ಕಂಡ್ಯೂರಿಗೆ ವರ್ಗ ಮಾಡಲಾಯಿತು.

ಇ) ಗಾಜರ್‌ಕೋಟೆಯಲ್ಲಿ ಸಾಕಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಲಭ್ಯವಿಲ್ಲದ ಕಾರಣ ಮತ್ತು ಕಂಡ್ಯೂರಿಗೆ ಅತ್ಯಾವಶ್ಯಕವಾಗಿ ವಿದ್ಯಾರ್ಥಿನಿಲಯ ತೆರೆಯಬೇಕಾಗಿ ಬಂದುದರಿಂದ ಈ ಮಂಜೂರಾಗಿದ್ದ ನಿಲಯವನ್ನು ವರ್ಗಾವಣೆ ಮಾಡಬೇಕಾಯಿತು.

ಈ) ಹೌದು.

ಉ) ಪರಿಶೀಲಿಸಲಾಗುವುದು.

ಸುಪ್ರೀಂ ಕೋರ್ಟ್ ತಡೆ ಆಜ್ಞೆ ನೀಡಿದ ದಿನಗೂಲಿ ನೌಕರರ ಬಗ್ಗೆ

೬೫೦. ಶ್ರೀ ಗೋಪಾಲ ಮಂಕುಂದ ಕಾನಡೆ (ಸಿರ್ಸಿ). ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆದಯವಿಟ್ಟು ಉತ್ತರಿಸುವವರೆ?

ಅ) ದಿನಗೂಲಿ ನೌಕರರನ್ನು ವಜಾ ಮಾಡಿರುವುದರ ಬಗ್ಗೆ ಸುಪ್ರೀಂಕೋರ್ಟು ಯಾವಾಗ ತಡೆ ಆಜ್ಞೆ ನೀಡಿತು?

ಆ) ತಡೆ ಆಜ್ಞೆ ಆದ ನಂತರ ಎಷ್ಟು ಜನರನ್ನು ಕೆಲಸದಿಂದ ತೆಗೆಯಲಾಯಿತು?

ಇ) ಸುಪ್ರೀಂ ಕೋರ್ಟು ತಡೆ ಆಜ್ಞೆ ನಿಂದನೆ ಮಾಡಲು ಕಾರಣಗಳೇನು?

ಈ) ತಡೆ ಆಜ್ಞೆ ನಿಂದನೆ ಬಗ್ಗೆ ಸರಕಾರದದ ಮುಖ್ಯ ಕಾರ್ಯದರ್ಶಿಯವರು ಕ್ಷಮಾಪಣೆ ನೀಡಿದ್ದಾರೆಯೆ?

ಉ) ತಡೆ ಆಜ್ಞೆ ನಿಂದನೆಯಿಂದ ಸರಕಾರದವರಿಗೆ ಆದ ಒಟ್ಟು ವೆಚ್ಚ ಎಷ್ಟು?

ಊ) ತಡೆ ಆಜ್ಞೆ ನಿಂದನೆಗೆ ಕಾರಣರಾದವರ ಬಗ್ಗೆ ಕೈಗೊಂಡ ಶಿಸ್ತಿನ ಕ್ರಮಗಳೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು)

ಅ) ದಿನಾಂಕ ೨೫-೭-೮೫ರಂದು ತಡೆ ಆಜ್ಞೆ ನೀಡಿತು.

ಆ) ಕೆಲಸದಿಂದ ತೆಗೆದು ಹಾಕಲ್ಪಟ್ಟವರ ಸಂಖ್ಯೆ ಸುಮಾರು ೯೦೦೦ ಇರಬಹುದೆಂದು ಅಂದಾಜು ಮಾಡಲಾಗಿದೆ.